# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 20 ಗಂಗಾನಗರ.ಬೆಂಗಳೂರು.**

ಸಂಖ್ಯೆ: ಸ.ಅ/ವಾ-20/ಪಿ.ಆರ್/ ೦೮ /2022-23 ದಿನಾಂಕ:-20-08-2022

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:-** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ: 20-08-2022 ರಂದು ವಾರ್ಡ್ ನಂ:20, 3ನೇ ಕ್ರಾಸ್, 108 ಬಸ್ ನಿಲ್ದಾಣದ ಹತ್ತಿರ ಹೆಚ್.ಎಂ.ಟಿ ಬಡಾವಣೆ ಗಂಗಾನಗರ, ಬೆಂಗಳೂರು ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### ::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ.ಸಿ.ಅಪ್ಪುರಾಜ್ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಶ್ರೀ.ಮೋಹನ್ ಕುಮಾರ್ | ಸದಸ್ಯ ಕಾರ್ಯದರ್ಶಿ ಮತ್ತು<br>ಸಹಾಯಕ ಅಭಿಯಂತರರು ವಾಡ್ ನಂ: 20 |
| 3. | ಕಿಶೋರ್‌ಗೌಡ.ಎಸ್ ಪಾಟೀಲ್ | ಸಹಾಯಕ ಅಭಿಯಂತರರು (ಕಿಯಾನಿಕ್ಸ್), ವಾರ್ಡ್-20 |
| 4. | ಶ್ರೀ. ಕೃಷ್ಣಮೂರ್ತಿ ಬಿ.ಎಂ | ಕಿರಿಯ ಅಭಿಯಂತರರು (ಬೆಸ್ಕಾಂ) |
| 5. | ರಂಜಿತಾ.ಎಂ.ಎ | ಪಿ.ಹೆಚ್.ಸಿ.ಓ ಗಂಗಾನಗರ. |
| 6. | ಶ್ರೀ.ಮಸೂದ್ | ಬೀದಿ ದೀಪಗಳ ನಿರ್ವಹಣೆ |
| 7. | ಶ್ರೀಮತಿ ಡಾ.ಶಾಲೀನಿ ದೇಶಪಾಂಡೆ | ಸಾರ್ವಜನಿಕರು |
| 8. | ಶ್ರೀ. ಶ್ರೀನಿವಾಸ್. | ಸಾರ್ವಜನಿಕರು |
| 9. | ಶ್ರೀ. ಎಂ.ಆರ್.ಪ್ರಸಾದ್ | ಸಾರ್ವಜನಿಕರು |
| 10. | ಶ್ರೀಮತಿ ವಿಜಯಾ ವಿ ಗ್ಲಾಡ | ಸಾರ್ವಜನಿಕರು |
| 11. | ಶ್ರೀ.ಎಂ.ಪಿ ಚಿಕ್ಕೇಗೌಡ | ಸಾರ್ವಜನಿಕರು |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ ಮೋಹನ್‌ಕುಮಾರ್ ರವರು ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ.ಸಿ.ಅಪ್ಪುರಾಜ್ ರವರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಮಾತನಾಡಲು ಕೋರಲಾಯಿತು.

1. ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ಸರಿಯಾಗಿ ಸರಬರಾಜು ಆಗುತ್ತಿಲ್ಲವೆಂದು ಸಾರ್ವಜನಿಕರು ಸಭೆಯಲ್ಲಿ ದೂರನ್ನು ನೀಡಿದ್ದು, ವಿದ್ಯುತ್ ಸರಬರಾಜನ್ನು ಸರಿಯಾಗಿ ಸರಬರಾಜು ಮಾಡುವಂತೆ ಬೆಸ್ಕಾಂ ಇಲಾಖೆಗೆ ಸೂಚಿಸಲಾಯಿತು.
2. ಹೆಚ್.ಎಂ.ಟಿ ಬಡಾವಣೆಯಲ್ಲಿನ ಚರಂಡಿಗಳಲ್ಲಿ ಸಿವೇಜ್ ಪೈಪ್ ಸೋರುತ್ತಿದ್ದು, ಸೋರುತ್ತಿರುವ ಸಿವೇಜ್ ಪೈಪ್ ಸರಿಪಡಿಸುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಲಾಯಿತು.
3. ವಾರ್ಡ್‌ನಲ್ಲಿ ಸುಮಾರು ಕಡೆ ಮರದ ರೆಂಬೆ ಕೊಂಬೆಗಳು ಜೋತು ಬಿದ್ದಿರುವುದನ್ನು ತೆರವುಗೊಳಿಸುವಂತೆ ಸಾರ್ವಜನಿಕರು ಕೋರಿಕೊಂಡರು.

4. 108 ಬಸ್ ನಿಲ್ದಾಣದಲ್ಲಿ ಅನಧಿಕೃತವಾಗಿ ವಾಹನ ನಿಲುಗಡೆ ಮತ್ತು ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿರುವುದನ್ನು ತೆರವುಗೊಳಿಸುವಂತೆ ಸಾರ್ವಜನಿಕರು ಕೋರಿದರು.
5. ಸಿ.ಎ-5 ಮೈದಾನದಲ್ಲಿ ವಾಹನ ತರಬೇತಿ ಶಾಲೆಯವರು ಕಾರು ಡ್ರೈವಿಂಗ್ ಕಲಿಯುತ್ತಿದ್ದು, ಗ್ರೌಂಡ್‌ನಲ್ಲಿ ಕಾರು ಚಾಲನೆ ಮಾಡುವುದನ್ನು ತಡೆಯಬೇಕೆಂದು ಸಾರ್ವಜನಿಕರು ಕೋರಿದರು.
6. ವಾರ್ಡ್ ಸಮಿತಿ ಸಭೆಗೆ ಕಡ್ಡಾಯವಾಗಿ ಎಲ್ಲಾ ಇಲಾಖೆಯ ಅಧಿಕಾರಿಗಳು ಹಾಜರಾಗಬೇಕೆಂದು ಸೂಚಿಸಲಾಯಿತು

ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 20 ಗಂಗಾನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 20 ಗಂಗಾನಗರ